ಆಹ್ವಾನಿಸಬೇಕೆಂದುಕೊಂಡಿದ್ದೆ. ಆದರೆ ಒಂದರ ಮೇಲೊಂದು ತುರ್ತು ಕೆಲಸಗಳು ಒತ್ತರಿಸಿಕೊಂಡು ಬಂದು ಆ ಯೋಜನೆಯನ್ನು ಮುಂದೂಡುತ್ತಲೇ ಬರುವಂತಾಯಿತು.'

'ಕೆಲಸಗಳು ನಿರಂತರವಾಗಿ ಸರಣಿಯಂತೆ ಬಂದು ನಮ್ಮನ್ನು ಎಂಗೇಜ್ ಮಾಡುತ್ತಲೇ ಇರುತ್ತೆ ಅವಿರತ್. ಈ ಕೆಲಸಾನೇ ಹಾಗೆ. ಮನೆಗೆ ಹೋದಾಗ ಕಾಡುವ ಏಕಾಂಗಿತನ ಹೋಗಲಾಡಿಸಲು ಕೊಂಚ ಮಟ್ಟಿಗೆ ನನ್ನ ರೊಬೋ ಮಾಮ್ ಸಹಕಾರಿಯಾಗಿದ್ದರೂ ನನ್ನನ್ನು ನಾನು ಪೂರ್ತಿಯಾಗಿ ತೊಡಗಿಸಿಕೊಳ್ಳಲೋಸ್ಕರ ಟ್ರಾಫಿಕ್ ವಾರ್ಡನ್ ಕೆಲಸಕ್ಕೆ ಒಪ್ಪಿಕೊಂಡೆ. ಈಗ ಅದನ್ನು ಬಿಡಲೂ ಆಗದ ಸಂದಿಗ್ಧ ಪರಿಸ್ಥಿತಿ ಎದುರಾಗಿದೆ.'

'ಸಮಾಜದೊಂದಿಗೆ ಬೆರೆತು ವಿವಿಧ ರೀತಿಯ ಜನರೊಂದಿಗೆ ಸ್ಪಂದಿಸಲು ಇದು ನಿನಗೆ ಸಹಕಾರಿಯಾಗಿದೆ. ಜನಸೇವೆಯೂ ಒಂದು ಪ್ಲಸ್ ಪಾಯಿಂಟ್' ಎಂದು ಅವಳನ್ನು ಒಳಗೆ ಕರೆದೊಯ್ಯುವಾಗ ಜಗಮಗಿಸುವ ಹೊಂಗಿರಣದ ಬೆಳಕಿನಲ್ಲಿ ಆಧುನಿಕ ಉಪಕರಣಗಳುಳ್ಳ ಒಂದು ಕಾರಿಡಾರ್ ಅನ್ನು ದಾಟಿಸಿದ್ದ. ಅವನೆಲ್ಲಿಗೆ ಕರೆದೊಯ್ಯುತ್ತಿರುವನೆಂದು ಕೇಳಬೇಕೆಂದುಕೊಂಡವಳಿಗೆ ತೂಗು ಹೂದೋಟ ಹಾಗೂ ನೀರ ಝರಿಯ ಕೆಳಗಿನ ರಮಣೀಯ ದೃಶ್ಯದಂತೆ ಸೃಷ್ಟಿಸಿದ ಒಳಾಂಗಣ ಗಮನ ಸೆಳೆದು ಮಾತು ಗಂಟಲಲ್ಲೇ ಉಳಿದಿತ್ತು. ಒಂದು ವಿನೂತನ ಲಿಫ್ಟ್‌ನಲ್ಲಿ ಮೂರನೆಯ ಮಹಡಿಗೆ ಕರೆದೊಯ್ಯುವಾಗ ಲಿಫ್ಟ್ ಗಾಜಿನ ಮೂಲಕ ಮನೆಯ ವಾತಾವರಣದ ಸೊಬಗನ್ನು ಸವಿಯಬಹುದಾಗಿತ್ತು. ಮೇಲಿನಿಂದ ಕೆಳಗಿನವರೆಗೂ ಒಂದು ಗುಡ್ಡದ ಮೇಲೆ ಹೂದೋಟ ನಿರ್ಮಿಸಿದಂತಿದ್ದು ನಡುವೆ ಹರಿಯುವ ಸಣ್ಣ ತೊರೆಯಲ್ಲಿ ಒಬ್ಬ ವ್ಯಕ್ತಿ ಕುಳಿತು ನೀರಿನ ರಭಸಕ್ಕೆ ಕೆಳಗೆ ಸಾಗಲು ಚಿಕ್ಕ ಸುಸಜ್ಜಿತ ಉಪಕರಣವಿತ್ತು. ಅವಳ ದೃಷ್ಟಿಯನ್ನು ಹಿಂಬಾಲಿಸಿದ ಅವಿರತ್ ತನ್ನ ಪರಿಶ್ರಮಕ್ಕೆ ಕಾರಣ ವಿವರಿಸತೊಡಗಿದ್ದ.

'ಹೊರಗೆ ಮರೆಯಾದ ರಮ್ಯ ಪರಿಸರ ನನ್ನ ಮನೆಯಲ್ಲಾದರೂ ನೆನಪಿಗೆ ಇರಲಿ ಎಂದು ಇಷ್ಟೆಲ್ಲಾ ಪರಿಶ್ರಮ ಪಡಬೇಕಾಯಿತು. ಇವುಗಳ ಮೇಲೆ ಸೂರ್ಯನ ಕಿರಣಗಳು ಬೀಳುವಂತೆ ಗೋಡೆಗೆ ಸಣ್ಣ ಮೈಕ್ರೋ ರಂಧ್ರವನ್ನು ಕೊರೆದು ಪ್ರತಿಫಲನಕ್ಕಾಗಿ ತಾಂತ್ರಿಕ ಕನ್ನಡಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಆದ್ದರಿಂದಲೇ ಗೋಡೆಗಳಿಂದ ಆವರಿಸಿದಂತೆ ಒಳಗೆ ಹಾಯುವ ಸೂರ್ಯನ ಬೆಳಕಿಗೆ ಈ ಹೂದೋಟ ಕಂಗೊಳಿಸುತ್ತಿದೆ.'

'ಅದ್ಭುತ. ನಿಮ್ಮ ಈ ಪರಿಕಲ್ಪನೆಗೆ ಹ್ಯಾಟ್ಸ್ ಆಫ್.'

'ದಿನವಿಡೀ ಹೊರಗೆ ನಮ್ಮ ಸಂಚಾರ ವ್ಯವಸ್ಥೆಯನ್ನು ನೋಡಿ ಅದಕ್ಕಿಂತ ಭಿನ್ನವಾಗಿರಲಿ ಎಂದು ಮೇಲಿನಿಂದ ತೊರೆಯ ಮೇಲೆ ಉಪಕರಣವೊಂದರಲ್ಲಿ ಕುಳಿತು ನೀರಿನ ಮೇಲೆ ತೇಲುತ್ತಾ ಕೆಳಗೆ ಬರುವ ವ್ಯವಸ್ಥೆ ಸಹ ಇದೆ.'

ಅವರ ಲಿಫ್ಟ್ ತಾರಸಿಗೆ ಬಂದು ತಲುಪಿ, ಹೊರಬಂದಾಗ ಅವರನ್ನು ಯುವತಿಯೋರ್ವಳು ಎದುರುಗೊಂಡಿದ್ದಳು.

'ಮೀಟ್ ಮೈ ರೊಬೋ ಮರಿ ಸುಪ್ರಜಾ...' ಎಂದಾಗ ಆ ಸಣ್ಣ ಹುಡುಗಿಯಂತೆ ತೋರುತ್ತಿದ್ದವಳು 'ಹಲೋ... ಗುಡ್ ಡೇ, ನೈಸ್ ಮೀಟಿಂಗ್ ಯೂ' ಎಂದು ಕೈ ಕುಲುಕಲು ಹಸ್ತ ಚಾಚಿದಾಗ ಹನ್ಸಾ ಮನೆಯ ಇತರ ಸದಸ್ಯರ ಬಗ್ಗೆ ಯೋಚಿಸುತ್ತಾ ಹಸ್ತಲಾಘವ ಮಾಡಿದಳು. ಅವಳ ಮುಖದ ಮೇಲೆ ಮೂಡಿದ ಪ್ರಶ್ನಾರ್ಥಕ ಚಿನ್ಹೆಯನ್ನು ಅರಿತವನಂತೆ ಅವಿರತ್, 'ನಿನಗೆಲ್ಲಾ ವಿವರಿಸುತ್ತೇನೆ. ಕುಳಿತುಕೊಂಡು ಮಾತನಾಡೋಣ' ಎಂದು ದುಂಡು ವಿನ್ಯಾಸದ ಅಲಂಕಾರಿಕ ಮೇಜಿನ ಬಳಿ ಕರೆದೊಯ್ದ.

ಹನ್ಸಾ ಕುರ್ಚಿಯಲ್ಲಿ ಆಸೀನಳಾಗಿ ಸುತ್ತಲೂ ಒಮ್ಮೆ ನಿರುಕಿಸಿದಳು. ಅವಿರತ್‌ನ ಕಲಾಭಿರುಚಿ ಇಲ್ಲೂ ಮೇಳೈಸಿದಂತಿತ್ತು. ಅವನಿಗೆ ಹೂದೋಟ ನಿರ್ಮಾಣದ ಹವ್ಯಾಸವಿದ್ದುದು ಅದನ್ನು ವ್ಯಕ್ತಪಡಿಸಲು ಮನೆಯೇ ಒಂದು ಹೂದೋಟವೇನೋ ಎಂಬಂತೆ ಒಳಗೂ ಹಾಗೂ ಹೊರಗೂ ಬಿಂಬಿಸಲಾಗಿತ್ತು.

'ನಿಮ್ಮ ತಂದೆ, ತಾಯಿ, ತಂಗಿ ಎಲ್ಲಿರುವರು?' ಎನ್ನುವ, ಅವಳನ್ನು ಆಗಿನಿಂದ ಕೊರೆಯುತ್ತಿದ್ದ ಪ್ರಶ್ನೆಗೆ ಅವಿರತ್ ನಿಧಾನವಾಗಿ ಕುಟುಂಬದ ಆಗುಹೋಗುಗಳನ್ನು ಬಿಚ್ಚಿಟ್ಟಿದ್ದ.

'ನಮ್ಮ ತಂದೆ–ತಾಯಿಗೆ ತಮ್ಮ ಜೀವಿತಾವಧಿಯಲ್ಲಿ ಪ್ರಪಂಚವನ್ನೆಲ್ಲಾ ಸುತ್ತಾಡಿ ಬರಬೇಕೆಂಬ ಇಚ್ಛೆ ಅಂಕುರಿಸಿತ್ತು. ಒಂದು ವಿಶೇಷ ಪ್ಯಾಕೇಜ್ ಅಡಿ ಹಿರಿಯ ನಾಗರಿಕರಿಗೆ ಅವಕಾಶವಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇನ್ನೇನು ಅವರು ಕೆಲದಿನಗಳಲ್ಲಿ ವಾಪಸ್ಸಾಗಬಹುದು. ಅವರಿಗೆ ನಿನ್ನನ್ನು ಮನೆಗೆ ಕರೆತರುತ್ತಿರುವ ವಿಷಯ ತಿಳಿಸಿರುವೆ. ಅವರು ಬಂದ ನಂತರ ನೀನು ಅವರನ್ನು ನೋಡಬಹುದು. ಜೊತೆಗೆ ಪ್ರಪಂಚದ ಸುದ್ದಿಯನ್ನು ಅವರ ಬಾಯಿಂದ ಕೇಳುವ ಸುಯೋಗವೂ ಸಿಗಲಿದೆ' ಎಂದು ನಾಟಕೀಯವಾಗಿ ನುಡಿದಾಗ ಹನ್ಸಾ ಅಷ್ಟೇ ಉತ್ಸಾಹದಿಂದ ಉದ್ಗರಿಸಿದಳು.

'ಹೌದೇನು!'

'ಅವರಿಗೆ ನಿನ್ನಂತಹವಳನ್ನು ಸೊಸೆಯಾಗಿ ಪಡೆಯುವ ಇಚ್ಛೆಯಿದೆ.'

'ಹಾಂ...!' ಈಗ ನಿಜವಾಗಿ ಅಚ್ಚರಿಪಡುವ ಸರದಿ ಹನ್ಸಾಳದಾಗಿತ್ತು. ಇದೇ ಅವಕಾಶವನ್ನು ಬಳಸಿಕೊಂಡು ಅವಿರತ್ ತನ್ನ ಮನದಿಂಗಿತವನ್ನು ನಿವೇದಿಸಿಕೊಳ್ಳತೊಡಗಿದ್ದ.

'ನನಗೆ ನಿನ್ನನ್ನು ನೋಡಿದಾಗಲೆಲ್ಲ ಬಾಳಸಂಗಾತಿಯನ್ನು ಕಂಡೆನೇನೋ ಎಂಬ ಅನೂಹ್ಯ ಭಾವನೆ ಮೂಡುತ್ತಿತ್ತು ಹನ್ಸಾ. ನಿನ್ನಲ್ಲಿ ನನ್ನ ಬಿನ್ನಹ ಹೇಳಲು ಬಹಳ ಪ್ರಯತ್ನಪಟ್ಟರೂ ಒತ್ತಡದ ಬದುಕಿನಡಿಯಲ್ಲಿ ಸಮಯವೇ ಕೂಡಿ ಬರಲಿಲ್ಲ. ಸನ್ನಿವೇಶಗಳೂ ಪೂರಕವಾಗಿರಲಿಲ್ಲ. ನೀನು ಒಪ್ಪುವುದಾದರೆ...'

ಹನ್ಸಾಳಿಗೆ ಅವನು ಏನು ಹೇಳ ಹೊರಟಿರುವನೆಂಬುದನ್ನು ಊಹಿಸುವುದು ಕಷ್ಟವಾಗಿರಲಿಲ್ಲ. ಅವನೊಂದಿಗಿನ ಒಡನಾಟ ಹಿತಕರವೆನಿಸಿ ತನ್ನ ವಿಚಾರಗಳನ್ನು ಹಂಚಿಕೊಳ್ಳಲು ಒಬ್ಬ ಗೆಳೆಯನಿದ್ದಾನೆಂಬ ಭಾವನೆ ಇತ್ತು. ಅವಿರತ್‌ನೂ ಅದಕ್ಕೆ ಸಮನಾಗಿ ಸ್ಪಂದಿಸಿದಾಗ ತಮ್ಮಿಬ್ಬರ ಆಲೋಚನಾ ಅಲೆಗಳು ಪೂರಕವಾಗಿದ್ದುದ್ದು ಆಶ್ಚರ್ಯಕರವಾಗಿತ್ತು.

ಪ್ರಥಮ ಭೇಟಿಯ ನಂತರ ಸಂಪರ್ಕ ಕಡಿದುಕೊಳ್ಳದೆ ಮತ್ತೆ ಮತ್ತೆ ಸಂಧಿಸಬೇಕೆಂಬ ತುಡಿತಕ್ಕೆ ಅರ್ಥ ಹುಡುಕತೊಡಗಿದ್ದಳು. ಈಗ ಅವಿರತ್‌ನ ಈ ನಿವೇದನೆಯನ್ನು ನಿರಾಕರಿಸಲು ಬೇರೆ ಕಾರಣವೇ ಕಾಣದಾಗಿತ್ತು. ಅವಳ ಕಣ್ಣಳಲ್ಲಿ ಸುಳಿದ ಮಿಂಚಿಗೆ ಅವಿರತ್‌ನಲ್ಲಿ ಗೆದ್ದೆನೆಂಬ ಸಂತೋಷ ತುಳುಕಿತ್ತು.

'ನೀನು ನನ್ನ ಬಾಳ ಜೊತೆಗಾತಿಯಾದರೆ ನಾನು ಚಂದ್ರನಲ್ಲಿಗೆ ಹಾರಲೂ ಹಿಂಜರಿಯುವುದಿಲ್ಲ.'

'ಅಷ್ಟೊಂದು ಆತ್ಮವಿಶ್ವಾಸವೇ?' ಕಣ್ಣರಳಿಸಿದಳು.

'ಹನಿ... ನನ್ನ ಮದುವೆಯ ನೋಂದಣಿ ಬಳಿಕ ಆಪ್ತರು ಪರಿಚಿತರನ್ನು 'ಗೆಟ್ ಟು ಗೆದರ್'ಗೆ ಕರೆದು ನಂತರ ಚಂದ್ರನಲ್ಲಿಗೆ ನನ್ನ ಜೊತೆಗಾರ್ತಿಯೊಂದಿಗೆ ಸಾಗಿ ಅಲ್ಲಿನ ಚಂದ್ರವಿಹಾರ ಕಾಲೋನಿಯಲ್ಲಿ ಕೆಲವು ದಿನ ಕಳೆಯೋಣ...' ಎಂದು ಮಾತನ್ನು ಅರ್ಧಕ್ಕೆ ನಿಲ್ಲಿಸಿದಾಗ ಅವನಲ್ಲಿ ಇಷ್ಟೆಲ್ಲಾ ಪೂರ್ವ ಯೋಜನೆಗಳಿವೆಯಲ್ಲ ಎಂದು ಚಕಿತಗೊಂಡಳು. ಹಿಂದೊಮ್ಮೆ ತನ್ನ ಮನೆಗೆ ಬಂದಾಗ ಚಂದ್ರನಲ್ಲಿಗೆ ತನಗೆ ಎಲ್ಲಿ ನಿಯೋಜಿಸಲಾಗುವುದೋ ಎಂದು ಆತಂಕ ವ್ಯಕ್ತಪಡಿಸಿದಾಗ ಸಮಾಧಾನ ಹೇಳಿದವನು ಈತನೇ ಅಲ್ಲವೇ ಎಂದು ಆಶ್ಚರ್ಯವಾಯಿತವಳಿಗೆ.

'ನಾನು ವಿಶ್ವ ಚಂದ್ರನೆಡೆಗೆ ಪ್ರವಾಸ ಕೇಂದ್ರಕ್ಕೆ ಈ ಹಿಂದೆ ಇಬ್ಬರು ವ್ಯಕ್ತಿಗಳಿಗೆ ಸೀಟ್ ಬುಕ್ ಮಾಡಿದ್ದೆ. ಅದು ನನ್ನ ತಂಗಿಯ ಮದುವೆಗೆ ಮೊದಲಿನ ಮಾತು. ನನ್ನ ತಂಗಿಗೆ ಮದುವೆಯಾಗಿ ಈಗ ಮಗುವೊಂದರ ನಿರೀಕ್ಷೆಯಲ್ಲಿರುವುದರಿಂದ ಅವಳು ಈಗ ಪ್ರಯಾಣ ಬೆಳೆಸುವ ಸ್ಥಿತಿಯಲ್ಲಿಲ್ಲ. ಯಂಗ್ ಅಂಡ್ ಡೈನಮಿಕ್ ಜೊತೆಗಾರ್ತಿಯೊಂದಿಗೆ ಚಂದ್ರನೆಡೆ ಪ್ರಯಾಣ ಬೆಳೆಸುವುದೆಂದರೆ ಸ್ವರ್ಗಕ್ಕೆ ಮೂರೇ ಗೇಣು ಎನ್ನುವುದು ಇದಕ್ಕೇ ಏನೋ?'

'ನನಗೆ ಆಮಿಷ ಒಡ್ಡುತ್ತಿರುವಿರಾ?' ಹುಸಿಗೋಪ ತೋರಿಸಿದಳು.

'ಆಮಿಷವಲ್ಲ ಹನಿ. ನಿನ್ನ ಒಪ್ಪಿಗೆಯಿದ್ದಲ್ಲಿ ಎಂದು ಮುಂಚೆನೇ ತಿಳಿಸಿದ್ದೆ.'

ಬಹಳ ಚಾಲಾಕಿ ಹಠಮಾರಿಯಂತೆ ಕಂಡಿದ್ದ. ಈ

## ಯೋಗ

ತಿನ್ನುವ ಚಪಲ
ತರುತ್ತದೆ ರೋಗ
ತಿನ್ನದೇ ಇದ್ದರೂ
ಬರುವುದು ಬೇಗ
ತಿನ್ನುವ ತಿನ್ನದ
ನಿಯಂತ್ರಣಕ್ಕೆ
ಮದ್ದೊಂದೇ;
.......ಯೋಗ



■ ವಿ.ಸುಬ್ರಹ್ಮಣ್ಯ ಭಟ್